

## ‘ಲಾಭ’

ರೋಗಿಗಳಿಲ್ಲದೆ ನೊಣ ಹೊಡೆಯುತ್ತ ಕುಳಿತಿದ್ದ ವೈದ್ಯರ ಕೋಣೆಗೆ ಹಠಾತ್ತನೆ ನುಗ್ಗಿದ ಗುಂಡ, ‘ನಮಸ್ಕಾರ ಡಾಕ್ಟ್ರೇ! ನನ್ನ ಹೆಸರು ಗುಂಡ. ನಿಮ್ಮನ್ನೆ ನೋಡಲು ಬಂದೆ’ ಎಂದ. ವೈದ್ಯರು, ‘ಓ ಹೌದಾ? ಏನು ಬಂದದ್ದು?’ ಎಂದು ಕೇಳಿದರು. ಗುಂಡ, ‘ಏನಿಲ್ಲ! ನೀವು ನೀಡಿದ ಚಿಕಿತ್ಸೆಯಿಂದ ನನಗೆ ಲಕ್ಷಾಂತರ ರೂಪಾಯಿ ಲಾಭ ಆಯ್ತೂಂತ ಹೇಳೋಕೆ ಬಂದೆ’ ಎಂದ.

ಆಶ್ಚರ್ಯಚಕಿತರಾದ ವೈದ್ಯರು. ‘ಆದರೆ, ನೀವು ನನ್ನ ಪೇಷೆಂಟ್ ಅಲ್ಲ! ನಾನು ನಿಮಗೆ ಚಿಕಿತ್ಸೆ ನೀಡಿಯೇ ಇಲ್ಲವಲ್ಲ’ ಎಂದರು.

ಅದಕ್ಕೆ ಗುಂಡ, ‘ಖಂಡಿತಾ ಇಲ್ಲ! ಆದರೆ, ನೀವು ನನ್ನ ಮಾವನವರಿಗೆ ಚಿಕಿತ್ಸೆ ನೀಡಿದ್ದೀರಿ! ಹಾಗಾಗಿ ಈಗ ಅವರ ಲಕ್ಷಾಂತರ ರೂಪಾಯಿ ಆಸ್ತಿಗೆ ನಾನೇ ಉತ್ತರಾಧಿಕಾರಿ’ ಎಂದ!

**ಎಂ.ಕೆ. ಮಂಜುನಾಥ್, ಬೆಂಗಳೂರು**

## ಆಟೋಗೆ ದುಡ್ಡಿಲ್ಲ

ಶ್ರೀಕಾಂತ ಸೆಕೆಂಡ್ ಶೋ ಸಿನಿಮಾ ನೋಡಲು ಆಟೋದಲ್ಲಿ ಹೊರಟಿದ್ದ. ಆಟೋ ಇಳಿದಾಕ್ಷಣ ಪರ್ಸನ್ನು ಮನೆಯಲ್ಲಿಯೇ ಬಿಟ್ಟು ಬಂದದ್ದು ಅವನಿಗೆ ನೆನಪಾಯಿತು. ಜೇಬುಗಳನ್ನೆಲ್ಲ ತಡಕಾಡಿ ಆಟೋದವನಿಗೆ ಹೇಳಿದ,

‘ಅಣ್ಣಾ, ನನ್ನ ನಾಲ್ಕು ಸಾವಿರ ರೂಪಾಯಿಗಳು ಇದ್ದ ಪರ್ಸ್ ಆಟೋದಲ್ಲಿ ಬಿದ್ದಿದೆ. ಸ್ವಲ್ಪ ಲೈಟ್ ಹಾಕ್ತೀಯ, ಹುಡುಕ್ತೀನಿ.’

ಮರುಕ್ಷಣವೇ ಚಾಲಕ ಆಟೋ ಸ್ಟಾರ್ಟ್ ಮಾಡಿ ಶರವೇಗದಲ್ಲಿ ಅಲ್ಲಿಂದ ನಾಪತ್ತೆಯಾದ!

**ಕೆ. ಶ್ರೀನಿವಾಸರಾವ್, ಹರಪನಹಳ್ಳಿ**

